## ಎಂ.ಎಸ್. ರಾಣೀರತ್ನಾ ರಾವ್

ಹೊರಗೆ ಹಾಲ್‌ನಲ್ಲಿ ಕುಳಿತಿದ್ದ ಮಕ್ಕಳೆಲ್ಲ ಬಿದ್ದು ಬಿದ್ದು ನಗುತ್ತಿದ್ದುದು, ಅಡಿಗೆ ಮನೆಯಲ್ಲಿ ನಾಳಿನ ತಿಂಡಿಗಾಗಿ ದೋಸೆಗೆ ಹಿಟ್ಟು ರುಬ್ಬುತ್ತಿದ್ದ ರೋಹಿಣಿಯ ಕಿವಿಗೂ ಬಿತ್ತು. ಹಿಟ್ಟು ನಯವಾಗಿ ಆಗಿದ್ದರಿಂದ ವೆಟ್ ಗ್ರೈಂಡರ್‌ನ ಸ್ವಿಚ್ ಆರಿಸಿ ಹಾಲ್‌ಗೆ ಬಂದಳು. ಅವಳನ್ನು ನೋಡಿ ಮೀನಾ ನಗು ತಡೆದುಕೊಳ್ಳುತ್ತಾ ಹೇಳಿದಳು:

'ಚಿಕ್ಕಮ್ಮ, ಮಾವಿನ ಹಣ್ಣು ಹೆಚ್ಚಿ ತಿನ್ನಬಾರದಂತೆ, ಕಚ್ಚಿ ತಿನ್ನಬೇಕಂತೆ, ಚಿಕ್ಕಪ್ಪ ಹೇಳಿದರು.'

ರೋಹಿಣಿ ಅಲ್ಲೇ ಇದ್ದ ಶ್ರೀನಿವಾಸನನ್ನು ಒಮ್ಮೆ ನೋಡಿ ಹೇಳಿದಳು.

'ಯಾಕಂತೆ?'

'ಹೆಚ್ಚಿ ತಿಂದರೆ ಓಟೆ ಪೂರ್ತಿ ತಿರುಳು ತಿನ್ನೋಕಾಗೊಲ್ಲ. ಕಚ್ಚಿ ತಿಂದಾಗ ಓಟೆಯನ್ನು ಚೀಪಬಹುದು ಅಂತ.'

'ಅದಕ್ಕೆ ನಗೋದ್ಯಾಕೆ?'

'ಚಿಕ್ಕಮ್ಮ, ಅಜ್ಜ ಹಣ್ಣು ತಿನ್ನೋದನ್ನು ಕಲ್ಪನೆ ಮಾಡ್ಕೋ.'

ಹಲ್ಲಿಲ್ಲದ ಮಾವನವರು ಹಣ್ಣನ್ನು ಕಚ್ಚಿ ತಿನ್ನುವುದನ್ನು ನೆನಸಿಕೊಂಡು ನಗು ಬಂದರೂ ನಗಲಾಗಲಿಲ್ಲ ರೋಹಿಣಿಗೆ. ಸುಮ್ಮನೆ ನಕ್ಕ ಶಾಸ್ತ್ರ ಮಾಡಿ ಕೆಲಸದ ನೆಪದಿಂದ ಒಳಗೆ ಬಂದಳು.

ನಮ್ಮದೇ ತೋಟದ ಮರ. ಬೇಕಾಷ್ಟು ಹಣ್ಣುಗಳು. ಯಾರು ಹೇಗೆ ತಿಂದರೆ ಇವರಿಗೇನು ಎಂದುಕೊಂಡಳು ರೋಹಿಣಿ. ಕಳೆದ ವರ್ಷ ಸ್ಕೂಲು ಪ್ರಾರಂಭವಾದಾಗ ಮಗ ರಮೇಶ ಹೇಳಿದ್ದ ಮಾತು ಅವಳಿಗೆ ನೆನಪಾಯಿತು.

'ಏನಮ್ಮ... ಅಪ್ಪ ಹೀಗೆ ಮಾಡ್ತಾರೆ! ಎಲ್ಲದರಲ್ಲೂ ದಂಡ ಮಾಡ್ಬೇಡ. ಉಳಿತಾಯ ಮಾಡು ಅಂತ. ಅತಿ ಆಗ್ಹೋಯ್ತು.'

'ಏನಪ್ಪ ರಮೇಶ, ಎಲ್ರೂ ಹೇಳ್ತಾರೆ ಅಂದ್ರೆ ನೀನೂ ಅನ್ನೋ ಹಾಗಾಗಿ ಬಿಟ್ಟೆಯಲ್ಲ, ಏನಾಯ್ತೀಗ?'

'ಪುಸ್ತಕದಲ್ಲಿ ಮಾರ್ಜಿನ್ ಬಿಡದೆ ಬರೀಬೇಕು ಅಂತಾರೆ. ಹಾಗೆ ಬರೀದಿದ್ರೆ ಅಪ್ಪ ಬೈತಾರೆ. ಬರೆದ್ರೆ ಮಿಸ್ಸು ಬೈತಾರೆ. ನಾನೇನು ಮಾಡಲಿ?'

ನಿರುತ್ತರಳಾಗಿದ್ದಳು, ರೋಹಿಣಿ. ಅದೇನೂ ಮೊದಲ ಸಲವಲ್ಲ. ಗಂಡ ಶ್ರೀನಿವಾಸ ಮೊದಲಿನಿಂದಲೂ ಹೀಗೇ. ಮೂವರು ಅಣ್ಣ ತಮ್ಮಂದಿರಲ್ಲಿ ವೆಂಕಟೇಶ ಹಿರಿಯವ. ಶ್ರೀನಿವಾಸ ಮಧ್ಯದವ. ವಾಸುದೇವ ಕಿರಿಯವ. ವೆಂಕಟೇಶನ ಪತ್ನಿ ವನಜಾ. ಅವರಿಗೆ ಮೂವರು ಮಕ್ಕಳು. ಮೀನ,